(ಆ) ಒಂದು ಉನ್ನತ ಮಟ್ಟದ ಸಮಿತಿಯನ್ನು ೧೯೮೪ರಲ್ಲಿ ರಚಿಸಲಾಗಿದೆ. ಸದ್ಯಕ್ಕೆ ಯೋಜನೆಗಾಗಿ ಲಭ್ಯವಿರುವ ಭೂಮಿಯ ಪರಿಷ್ಕೃತ ನಕ್ಷೆಯನ್ನು ತಯಾರಿಸಲಾಗಿದೆ. ನೆಹರು ಲೋಕದ ಅಭಿವೃದ್ಧಿ, ಅದರ ವ್ಯಾಪ್ತಿ, ಆಕಾರ ಮತ್ತು ಗಾತ್ರ ಇತ್ಯಾದಿಗಳ ರೂಪರೇಷೆಗಳನ್ನು ತಯಾರಿಸಲು ಇತ್ತೀಚೆಗೆ ಒಂದು ಉಪ ಸಮಿತಿಯನ್ನು ರಚಿಸಲಾಗಿದ್ದು ಇಷ್ಟರಲ್ಲೇ ಅದು ವರದಿ ಸಲ್ಲಿಸಲಿದೆ.

(ಇ) ಯೋಜನೆಗಾಗಿ ಇದುವರೆವಿಗೂ ಹಣ ಒದಗಿಸಲಾಗಿಲ್ಲ.

ಸ್ವಾತಂತ್ರ್ಯ ಯೋಧರ ಮಾಸಾಶನ

೨೫(೧೮೨) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಮಾಶಾಸನ ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

(ಆ) ಇವರಿಗಾಗಿ ಪಾವತಿ ಮಾಡುತ್ತಿರುವ ಒಟ್ಟು ಹಣವೆಷ್ಟು?

(ಇ) ಯಾವ ಆಧಾರದ ಮೇಲೆ ಸ್ವಾತಂತ್ರ್ಯ ಯೋಧರೆಂದು ಪರಿಗಣಿಸಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ರಾಜ್ಯದಲ್ಲಿ ಒಟ್ಟು ೨೨,೨೯೩ ಜನ ಸ್ವಾತಂತ್ರ್ಯ ಯೋಧರು ಮಾಶಾಸನ (ರಾಜ್ಯ ಗೌರವಧನ) ಪಡೆಯುತ್ತಿದ್ದಾರೆ (ಜಿಲ್ಲಾವಾರು ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

(ಆ) ೧೯೮೬-೮೭ನೇ ಸಾಲಿಗೆ ರೂ. ೨,೩೩,೦೦,೦೦೦ ನ್ನು ಪಾವತಿ ಮಾಡಲಾಗುತ್ತಿದೆ.

(ಇ) ಭಾರತ ಸ್ವಾತಂತ್ರ್ಯ ಸಂಗ್ರಾಮದ ನಿಮಿತ್ತ ತುರಂಗವಾಸ ಅನುಭವಿಸಿದವರು ಹಾಗೂ ಭೂಗತಕಾರ್ಯ ನಿರ್ವಹಿಸಿದವರನ್ನು ಸ್ವಾತಂತ್ರ್ಯ ಯೋಧರೆಂದು ಪರಿಗಣಿಸಲಾಗಿದೆ.

ಪ್ರಶ್ನೆಯ (ಅ) ಭಾಗಕ್ಕೆ ಉತ್ತರ—ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಗಳು	ರಾಜ್ಯ ವೇತನ	ರಾಜ್ಯ ಮತ್ತು ಕೇಂದ್ರ ವೇತನ
೧.	ಬೆಂಗಳೂರು	೧೮೨೯	೪೩೨
೨.	ಬಳ್ಳಾರಿ	೨೨೫	೩೪೬
೩.	ತುಮಕೂರು	೧೧೭೭	೨೫೩
೪.	ಚಿತ್ರದುರ್ಗ	೧೩೬೬	೧೫೭
೫.	ಕೋಲಾರ	೭೧೪	೧೧೩
೬.	ಮೈಸೂರು	೫೩೮	೧೩೦
೭.	ಮಂಡ್ಯ	೩೩೫	೫೪
೮.	ಹಾಸನ	೫೪೨	೧೦೫
೯.	ಶಿವಮೊಗ್ಗ	೨೫೫೬	೬೦೧
೧೦.	ಚಿಕ್ಕಮಗಳೂರು	೨೪೯	೫೨
೧೧.	ದಕ್ಷಿಣ ಕನ್ನಡ	೬೦೧	೩೯೬
೧೨.	ಕೊಡಗು	೮೮	೧೭೬
೧೩.	ಬೆಳಗಾವಿ	೩೯೨೬	೧೬೮೫
೧೪.	ಬಿಜಾಪುರ	೧೨೫೨	೨೪೨
೧೫,	ಧಾರವಾಡ	೪೪೨೧	೧೮೨೯
೧೬.	ಉತ್ತರ ಕನ್ನಡ	೧೧೮೩	೬೮೨
೧೭.	ಗುಲ್ಬರ್ಗ	೪೪೭	೭೪
೧೮.	ಬೀದರ್	೭೫	೨೭
೧೯.	ರಾಯಚೂರು	೩೨೯	೪೫
	ಒಟ್ಟು	೨೨,೨೯೩	೭,೪೩೯